**<u>ಸಿ.ಸಿ.೧೭೬/೨೦೧೮</u>**

**ಪಿ.ಡಬ್ಲು.೧**

ಸಾಕ್ಷಿಯನ್ನು ಇಂದು ದಿನಾಂಕ: *13.08.2024* ರಂದು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು

***<u>ಪಾಟೀ ಸವಾಲು ಆರೋಪಿ ಶ್ರೀ ಬಿ.ಜಿ.ಬಿ. ವಕೀಲರಿಂದ</u>***

ನನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ ಎಂಧರೆ ಸರಿ. ಪೋಲಿಸ್ ಠಾಣೆಗೆ ನಾನು, ಚಾಸಾ-೩, ೪, ೫, ೮ ರವರು ಹೋಗಿದ್ದೆವು ಎಂದು ನುಡಿಯುತ್ತಾರೆ. ಆರೋಪಿತರು ಮತ್ತು ಚಾಸಾ-8, ರವರ ನಡುವೆ ವೈಮನಸ್ಸಿರುತ್ತದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನು ಪೋಲಿಸರ ಠಾಣೆಗೆ ಎರಡು ಬಾರಿ ಹೋಗಿರುತ್ತೇನೆ. ಒಂದೊಂದು ದಿನ ಬಿಟ್ಟು ಎರಡು ಸಲ ಹೋಗಿರುತ್ತೇನೆ. ಫಿರ್ಯಾದಿಯನ್ನು 2017 ರಲ್ಲಿ

ನೀಡಿರುತ್ತೇನೆ. ಫಿರ್ಯಾದಿಯನ್ನು ನಾನೇ ಸಲ್ಲಿಸಿರುತ್ತೇನೆ. ನಾನು ಫಿರ್ಯಾದಿಯನ್ನು ಹಿಂದಿಯಲ್ಲಿ ಹೇಳಿರುತ್ತೇನೆ, ಪೋಲಿಸರು ಬರೆದುಕೊಂಡಿರುತ್ತಾರೆ. ಬರೆದುಕೊಂಡ ನಂತರ ನನಗೆ ಓದಿ ಹೇಳಿರುವುದಿಲ್ಲ. ಫಿರ್ಯಾದಿಯಲ್ಲಿ ಏನು ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ, ಸಹಿ ಮಾಡು ಎಂದು ಹೇಳಿದಕ್ಕೆ ಸಹಿ ಮಾಡಿರುತ್ತೇನೆ ಎಂಧರೆ ಸರಿ. ಫಿರ್ಯಾದಿ ಕೊಡುವ ಕಾಲಕ್ಕೆ ಆರೋಪಿ ನಂ.೧ ನನ್ನನ್ನು ಆಳಂದದ ಮಟಕಿ ರಸ್ತೆಯ ಕಡೆ ಬೇರೆ ಮನೆ ಮಾಡಿ ಇಟ್ಟಿದ್ದನು ಎಂದರೆ ಸರಿ ಅಲ್ಲ. ನಾನು ಫಿರ್ಯಾದಿ ಕೊಡುವ ಕಾಲಕ್ಕೆ ನನ್ನ ಅಜ್ಜಿಯ ಮನೆಯಲ್ಲಿದ್ದೆನು. ನಾನು ಅಜ್ಜಿಯ ಮನೆಯಲ್ಲಿ 3 ತಿಂಗಳು ಇದ್ದೆನು. ಫಿರ್ಯಾದಿಯನ್ನು ಸಲ್ಲಿಸುವ ಸಮಯದಲ್ಲಿ ನಾನು ಆರೋಪಿ ಮನೆಯಲ್ಲಿ ಇರಲಿಲ್ಲ ಎಂದರೆ ಸರಿ. ಮದುವೆ ಆದ ಒಂದು ವರ್ಷದ ವರೆಗೆ ಗಂಡನ ಮನೆಯಲ್ಲಿ ಚೆನ್ನಾಗಿ ಇದ್ದೆನು. ನನ್ನನ್ನು ಆರೊಪಿ ನಂ.೧ ದಿಲ್ಲಿಯಲ್ಲಿ ಅವನ ಜೊತೆಗೆ ಇರಲು ಕರೆದುಕೊಂಡು ಹೋಗಿದ್ದನು ಎಂದರೆ ಸರಿ. ಯಾರಿಗೂ ಹೇಳದೇ ಕೇಳದೇ ಚಾಸಾ-೪ ನನ್ನ ತಾಯಿ ನನ್ನನ್ನು ದೆಹಲಿಯಿಂದ ಮುಂಬೈಗೆ ಕರೆದುಕೊಂಡು ಬಂದಳು ಎಂದರೆ ಸರಿ ಅಲ್ಲ. ದೆಹಲಿಯಿಂದ ಮುಂಬೈಗೆ ನಾನು ಹೋಗಿರುವುದಿಲ್ಲ, ದೆಹಲಿಯಿಂದ ಅಳಂದಕ್ಕೆ ನನ್ನ ಗಂಡನ (ಆರೋಪಿ ನಂ.೧) ಜೊತೆ ಬಂದಿರುತ್ತೇನೆ. ನನಗೆ ಬಂಗಾರ ತೆಗೆದುಕೊಂಡ ಬಾ, ಹಣ ತೆಗೆದುಕೊಂಡು ಬಾ ಎಂದು ಆರೋಪಿತರು ಹೇಳಿರುವುದಿಲ್ಲ ಎಂಧರೆ ಸರಿ ಅಲ್ಲ. ನನಗೆ ಎರಡು ತೊಲೆ ಬಂಗಾರ ತೆಗೆದುಕೊಂಡು ಬಾ, ಹಣ ತೆಗೆದುಕೊಂಡು ಬಾ ಎಂದು ಕಿರುಕುಳ ಕೊಡುತ್ತಿದ್ದರು. ಯಾವತ್ತೂ ಆರೋಪಿತರು ಬಂಗಾರ ತೆಗೆದುಕೊಂಡು ಬಾ, ಹಣ ತೆಗೆದುಕೊಂಡು ಬಾ ಎಂದು ಹೇಳಿರುವುದಿಲ್ಲ ಎಂದರೆ ಸರಿ ಅಲ್ಲ. ಆರೋಪಿತರು ಯಾವತ್ತು ನನಗೆ ಕಿರುಕುಳ ನೀಡಿರುವುದಿಲ್ಲ ಎಂಧರೆ ಸರಿ ಅಲ್ಲ. ನಾನು ಯಾವತ್ತು ಹೇಳಿಕೆ ನೀಡಿರುವುದಿಲ್ಲ, ಇದೇ ಮೊದಲ ಬಾರಿಗೆ ಹೇಳಿಕೆ ನೀಡುತ್ತಿದ್ದೇನೆ ಎಂಧರೆ ಸರಿ ಅಲ್ಲ.

ಪೋಲಿಸರು ಈ ಘಟನೆ ಕುರಿತು ಎರಡು ಬಾರಿ ಮಾಹಿತಿಯನ್ನು ಪೋಲಿಸ್ ಠಾಣೆಯಲ್ಲೇ ಕೇಳಿರುತ್ತಾರೆ, ಮನೆಯಲ್ಲಿ ಕೇಳಿರುವುದಿಲ್ಲ. ಆರೋಪಿತರು ನನ್ನನ್ನು ಕರೆದುಕೊಂಡು ಹೋಗುತ್ತೇನೆ, ಚೆನ್ನಾಗಿ ನೋಡಿಕೊಳ್ಳುತ್ತೇನೆ ಎಂದು ಹೇಳಿ ಸಾಕಷ್ಟು ಸಲ ಪಂಚಾಯತಿ ಮಾಡಿರುತ್ತಾರೆ ಎಂಧರೆ ಸರಿ ಅಲ್ಲ, ನಾನೇ ಇರುತ್ತೇನೆ ಎಂದು ಹೇಳಿ ಸಾಕಷ್ಟು ಸಲ ಪಂಚಾಯತಿ ಮಾಡಿದ್ದರು ಕರೆದುಕೊಂಡು ಹೋಗಿರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಕಲಬುರಗಿ ನ್ಯಾಯಾಲಯದಲ್ಲಿ ಜೀವನಾಂಶ ಕೋರಿ ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಸರಿ. ಕಲಬುರಗಿಯಲ್ಲಿ ಜೀವನಾಂಶ ಕೇಳಿ ಸಲ್ಲಿಸಿದ ಅರ್ಜಿಯಲ್ಲಿ ಕೌನ್ಸಿಲಿಂಗನಲ್ಲಿ ನಾನು ಆರೋಪಿಯ ಜೊತೆ ಹೋಗುವುದಿಲ್ಲ ಎಂದು ಹೇಳಿರುತ್ತೇನೆ ಎಂದರೆ ಸರಿ. ಆರೋಪಿ ನಂ.೧ ಈಗಲು ಸಹ ಕರೆದುಕೊಂಡು ಹೋಗಲು ಸಿದ್ದನಿದ್ದಾನೆ ನೀವು ಹೋಗಲು ಸಿದ್ದರಿದ್ದೀರಾ ಎಂದರೆ ಸಾಕ್ಷಿಯು ಅವನು ಎಲ್ಲಿ ಕರೆದುಕೊಂಡು ಹೋಗುತ್ತಾನೆ ಅಲ್ಲಿ ಇರಲು ತಯಾರಿದ್ದೇನೆ ಎಂದು ನುಡಿಯುತ್ತಾರೆ.

ಚಾಸಾ-2, 3, 5 ರಿಂದ 9 ರವರು ನನ್ನ ಸಂಬಂಧಿಕರಾಗಬೇಕು. ಸಾಕ್ಷಿದಾರರನ್ನು ಹೊರತುಪಡಿಸಿ ಬೇರೆ ಎಷ್ಟು ಜನರು ಇದ್ದರು ಎಂದರೆ ಸಾಕ್ಷಿ 4-5 ಜನರು ಇದ್ದರು ಎಂದು ನುಡಿಯುತ್ತಾರೆ. 4-5 ಜನರು ಜಗಳವನ್ನು ಬಿಡಿಸಿದರಾ ಎಂದರೆ ಸಾಕ್ಷಿ ಬುದ್ದಿವಾದ ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ಯಾವುದೇ ಘಟನೆ ನಡೆಯದಿದ್ದರೂ ಚಾಸಾ-8 ಮತ್ತು 9 ರವರ ಮಾತನ್ನು ಕೇಳಿಕೊಂಡು ಖೊಟ್ಟಿ ಫಿರ್ಯಾದಿಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ. ಆರೋಪಿತರು ಯಾವತ್ತೂ ಬಂಗಾರ ತೆಗೆದುಕೊಂಡು ಬಾ,

ಹಣವನ್ನು ತೆಗೆದುಕೊಂಡು ಬಾ ಎಂದು ಹೇಳಿರುವುದಿಲ್ಲ ಎಂದರೆ ಸರಿ ಅಲ್ಲ. ಯಾವುದೇ ಘಟನೆ ನಡೆಯದಿದ್ದರೂ ಖೊಟ್ಟಿ ಫಿರ್ಯಾದಿಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಥರೆ ಸರಿ ಅಲ್ಲ.

ಮರುವಿಚಾರಣೆ : ಇರುವುದಿಲ್ಲ.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ.ಆಳಂದ